# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಎಚ್. ರಸ್ತೆ, ತುಮಕೂರು – 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ/ಸಂ.ವಿ:/2023-24/ 1044 ದಿನಾಂಕ: 21.02.2024

## ಸುತ್ತೋಲೆ

ವಿಷಯ: ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ-2" (Monthly Research Lecture Series-2)** ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

ಉಲ್ಲೇಖ:
1. ಪ್ರೊ. ಎಸ್ ಆರ್ ನಿರಂಜನ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರ ಪತ್ರ ಸಂಖ್ಯೆ: KSHEC/156/Research Lecture Series/2023-24/128 ದಿನಾಂಕ:20.02.2024.
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 25.01.2024 (ಕಂಡಿಕೆ-155).

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾನಿಲಯಗಳನ್ನೊಳಗೊಂಡ **"Research Day of Council"** ಎಂಬ ಹೆಸರಿನಲ್ಲಿ **ಆನ್‌ಲೈನ್ "ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" (Monthly Research Lecture Series)** ಯನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು ವಿಶ್ವವಿದ್ಯಾನಿಲಯದ ಅಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ತಮ್ಮ ಇತ್ತೀಚಿನ ಸಂಶೋಧನೆಗಳ ಬಗ್ಗೆ ಜ್ಞಾನವನ್ನು ಹಂಚಿಕೊಳ್ಳುವುದು ಹಾಗೂ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶವಾಗಿರುತ್ತದೆ.

ಈ ಸಂಬಂಧ, ಸದರಿ ಸರಣಿಯ ಎರಡನೇ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ-2" (Monthly Research Lecture Series-2)** ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು **ದಿನಾಂಕ: 29.02.2024 ರ ಗುರುವಾರ ಬೆಳಗ್ಗೆ 10.30 ಗೆ** ಆನ್‌ಲೈನ್ ಮುಖಾಂತರ ಆಯೋಜಿಸಲಾಗಿದ್ದು, **ಉಪನ್ಯಾಸ ಸರಣಿಯ ಪ್ರಾರಂಭದಲ್ಲಿ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಕೆ. ಜಿ ಚಂದ್ರಶೇಖರ್ ರವರು ಎಲ್ಲರನ್ನು ಸ್ವಾಗತಿಸಲಿದ್ದಾರೆ ಹಾಗೂ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ. ಎಸ್ ಆರ್ ನಿರಂಜನ ರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಲಿದ್ದಾರೆ.** ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಸದರಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು **ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ** ವತಿಯಿಂದ ಈ ಕೆಳಕಂಡ ಆಯ್ದ ಸಂಪನ್ಮೂಲ ವ್ಯಕ್ತಿಗಳು ನೀಡುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಈ ಮೂಲಕ ತಿಳಿಸಲಾಗಿದೆ.

| ಕ್ರ.ಸಂ | ಸಂಪನ್ಮೂಲ ವ್ಯಕ್ತಿಗಳ ವಿವರ | ಶೀರ್ಷಿಕೆ | ಸಮಯ |
|---|---|---|---|
| 01 | Prof. J R Tonannavar<br>Dept. of Physics, KUD | Constructing and Understanding H-bonded zwitterionic tetramer for L-(-(+)-2 Chlorophentylglycine | 10.30 AM |
| 02 | Prof. L. A. Shastri<br>Dept. of Chemistry, KUD | Elimination Reactions | 11.10 AM |
| 03 | Prof. K. S. Devaraju<br>Dept. of Biochemistry. KUD | Protein Phosphatases assay methods and substrate specificity | 11.50 AM |
| 04 | Prof. M. David<br>Dept. of Zoology, KUD | Phytofabrication of Bioinduced Nanoparticles for Biomedical Applications | 12.30 PM |

| | | | |
|---|---|---|---|
| 05 | Prof. B. H. Nagoor<br>Dept. of Economics, KUD | India Developed Country by 2047:The Task ahead | 2.00 PM |
| 06 | Dr. Shivakumar M A<br>Dept. of Law, KUD | • Constitution of India<br>• Environmental Law | 2.40 PM |
| 07 | Dr. N. H. Kallur<br>Dept. of English, KUD | Foundations of Postcolonial Theory | 3.20 PM |

ವಿಶೇಷ ಸೂಚನೆ: "ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ–2" **(Monthly Research Lecture Series-2)** ಕಾರ್ಯಕ್ರಮವನ್ನು https://meet.google.com/cda-kaoo-ums ಆನ್‌ಲೈನ್ ಲಿಂಕ್ ಮುಖಾಂತರ ಪಾಲ್ಗೊಳ್ಳಬಹುದು.

ಆದೇಶದ ಮೇರೆಗೆ,

21/02/2024.

ನಿರ್ದೇಶಕರು–ಸಂಶೋಧನೆ (ಪ್ರ)

Director - Research
Tumkur University
Tumkur-572103

ಇವರಿಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ತಮ್ಮ ವಿಭಾಗದಲ್ಲಿನ ಅಧ್ಯಾಪಕರು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಸದರಿ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು)
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು)

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರು ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.